ಮಾಡದೇ, ಮಧ್ಯ ಮಾತಾಡದೇ ಕೇಳಿಸಿಕೊ" ಎಂದ ಪ್ರಾಣೇಶ. ಆ ಕ್ಷಣಕ್ಕೆ ಏನೇನು ಮನಸ್ಸಿಗೆ ತೋಚಿತೋ ಅದನ್ನೆಲ್ಲ ಬಿಟ್ಟೂಬಿಡದೆ ಮಾತಾಡಿದ. "ದಯವಿಟ್ಟು ಇವತ್ತು ಸಂಜೆ ಪಾರ್ಟಿಗೆ ಬಾ, ಜೊತೆಗೆ ದಯವಿಟ್ಟು ನಿನ್ನ ಬಾಯ್‌ಫ್ರೆಂಡನ್ನೂ ಕರೆದುಕೊಂಡು ಬಾ. ಗರ್ಲ್‌ಫ್ರೆಂಡ್‌ನ್ನು ಎಲ್ಲರೂ ಹೇಗೆ ಪರಿಚಯ ಮಾಡಿಕೊಡುತ್ತಾರೋ ಅಷ್ಟೇ ಖುಷಿಯಿಂದ ನಿನ್ನ ಬಾಯ್‌ಫ್ರೆಂಡ್‌ನ್ನು ಎಲ್ಲರಿಗೂ ಪರಿಚಯ ಮಾಡಿಕೊಡುತ್ತೇನೆ. ನಿನ್ನ ಬಾಯ್‌ಫ್ರೆಂಡ್ ಏಷಿಯನ್, ಬಿಳಿಯ, ಕರಿಯ ಯಾರೇ ಆಗಿರಲಿ; ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಏನೇ ಆಗಿರಲಿ. ಇದು ನನ್ನ ಪ್ರಾಮಿಸ್. ನಿನ್ನ ತಾಯಿಗೆ ಹೇಳುವ ಜವಾಬ್ದಾರಿಯನ್ನು ನನಗೆ ಬಿಡು. ನೀವಿಬ್ಬರೂ ಎಷ್ಟು ದಿನ ಒಟ್ಟಿಗೆ ಇರುತ್ತೀರೋ ಇಲ್ಲವೋ ಗೊತ್ತಿಲ್ಲ, ಮದುವೆಯಾಗುತ್ತೀರೋ ಇಲ್ಲವೋ ಅದೂ ಗೊತ್ತಿಲ್ಲ. ಆದರೆ, ನನಗೆ ಅದಾವುದೂ ಮುಖ್ಯವಲ್ಲ. ನೀನು ಇವತ್ತು ಪಾರ್ಟಿಗೆ ಬರಬೇಕು, ಅಷ್ಟೇ. ನಾನು ಇನ್ನೊಮ್ಮೆ ನಿನ್ನಲ್ಲಿ ಕ್ಷಮೆಯಾಚಿಸುತ್ತ ನೀನು ಪಾರ್ಟಿಗೆ ಬರಲೇಬೇಕೆಂದು ಪ್ರಾರ್ಥಿಸುತ್ತಿದ್ದೇನೆ." ಮಗ ಬರುತ್ತೇನೆಂದು ಪ್ರಾಮಿಸ್ ಮಾಡಿದ ಮೇಲೆಯೇ ಫೋನ್ ಇಟ್ಟ.

ಅಷ್ಟರಲ್ಲಿ ಪದ್ಮಜಾ ಎರಡು ಸಲ ಫೋನು ಮಾಡಿದ್ದಳು. ಮಗನ ಫೋನ್ ಇಡುತ್ತಿದ್ದಂತೆಯೇ ಪದ್ಮಜಾಳಿಗೆ ಫೋನ್ ಮಾಡಿ, ಇಷ್ಟೊತ್ತು ಮಗನ ಜೊತೆ ಮಾತಾಡುತ್ತಿದ್ದೆನೆಂದು ಹೇಳಿದ. ತಾನು ಬರುವುದು ಇನ್ನೂ ಅರ್ಧಗಂಟೆಯಾಗುತ್ತದೆಂದೂ, ಬರುವಷ್ಟರಲ್ಲಿ ಯಾರ ಕೈಗೂ ಸಿಗದಂತೆ ಮೇಲೆ ಇಟ್ಟಿದ್ದ ಜ್ಯುವೆಲರಿ ಬಾಕ್ಸನ್ನು ಕೆಳಗೆ ಇಟ್ಟಿರಬೇಕೆಂದೂ ಹೇಳಿದಳು. "ಆಯಿತು" ಎಂದು ಹೇಳಿ, "ಪದ್ದೀ, ತಿರುಪತಿ ಮತ್ತು ಮಂತ್ರಾಲಯಕ್ಕೆ ಬರಲು ನಾನು ರೆಡಿ. ಬ್ರಹ್ಮೋತ್ಸವಕ್ಕೆ ಯಾರು ಬೇಕೋ ಎಲ್ಲರನ್ನೂ ಕರೆದುಬಿಡು. ಮಂತ್ರಾಲಯದಲ್ಲಿ ನೀನು ಏನು ಹೇಳುತ್ತೀಯೋ ಆ ಸೇವೆಯನ್ನು ಮಾಡುತ್ತೇನೆ, ಆಯ್ತಾ?" ಎಂದ. ಪದ್ಮಜಾ ಖುಷಿಯಿಂದ, "ಏನಿದು? ಆ್ಯನಿವರ್ಸರಿ ಸರ್‌ಪ್ರೈಸಾ? ಏನಿವತ್ತು ರಾಯರಿಗೆ ದೇವರು ಇಷ್ಟು ಒಳ್ಳೆಯ ಬುದ್ಧಿಕೊಟ್ಟಿದ್ದಾನೆ! ಥ್ಯಾಂಕ್ಯೂ" ಎಂದಳು.

ಪದ್ಮಜಾಳ ಫೋನ್ ಇಟ್ಟ ಮೇಲೆ ವಾಟ್ಸ್‌ಆ್ಯಪ್‌ನಲ್ಲಿ 'ಪಿ.ಜಿ.ಐ–ಚಂಡೀಗಡ' ಗ್ರುಪ್ ತೆರೆದು 'ಗ್ರುಪ್ ಇನ್‌ಫೋ'ಗೆ ಹೋದ, ಅಲ್ಲಿರುವ ಜನರನ್ನು ಸ್ಕ್ರೋಲ್ ಮಾಡಿದ. ಒಂದು ಫೋನ್ ನಂಬರಿನ ಮುಂದೆ jassi ಎಂದು ಕಾಣಿಸಿತು. ಫೋನ್ ಮಾಡಿದ. ರಿಂಗ್ ಆಯಿತು. ಅತ್ತ ಕಡೆಯಿಂದ, "ಹಲೋ" ಕೇಳಿಸಿತು. "ಜಸ್ಸೀ?" ಅಂದ. "ಎಸ್, ಸ್ಪೀಕಿಂಗ್" ಎಂದಳು. "ನಾನು, ಪ್ರಾಣ್" ಎಂದು ಹೇಳಿ ಬಿಕ್ಕಿಬಿಕ್ಕಿ ಅಳತೊಡಗಿದ. "ಹೇ ಪ್ರಾಣ್, ಸಬ್ ಠೀಕ್ ಹೈ ನಾ (ಎಲ್ಲ ಸರಿ ಇದೆಯಾ)?" ಎಂದು ಜಸ್ಸಿ ಆತಂಕದಲ್ಲಿ ಕೇಳಿದಳು. ಮನಸ್ಸಿನಾಳದಲ್ಲೆಲ್ಲೋ ಜಗಜೀತಸಿಂಗ, 'ಆಖಿರಿ ಹಿಚಕಿ ತೆರೆ ಜಾನೋ ಮೇಂ ಆಯೆ, ಮೌತ್ ಕೋ ಭೀ ಶಾಯರಾನಾ ಚಾಹತಾ ಹೂಂ (ನನ್ನ ಕೊನೆಯುಸಿರು ನಿನ್ನ ಮಡಿಲಲ್ಲಿ ಬರಲಿ, ಸಾವಿಗೂ ಸಹ ಕವಿತೆಯಾಗಲು ಬಯಸುವೆನು)' ಎಂದು ತನಗಾಗಿಯೇ ಗಝಲನ್ನು ಹಾಡಿದಂತಾಯಿತು.


**ಕೇಶವ ಕುಲಕರ್ಣಿ**

ಹುಟ್ಟಿದ್ದು ಹುಬ್ಬಳ್ಳಿ, ಬೆಳೆದದ್ದು ವಿಜಾಪುರ ಮತ್ತು ಬಾಗಲಕೋಟೆಯಲ್ಲಿ. ಎಂ.ಬಿ.ಬಿ.ಎಸ್. ಮತ್ತು ಎಂ.ಡಿ. ಪದವೀಧರ. ವೃತ್ತಿಯಿಂದ ರೇಡಿಯಾಲಾಜಿ ವೈದ್ಯ; ವಾಸ ಇಂಗ್ಲೆಂಡಿನ ಬರ್ಮಿಂಗ್‌ಹ್ಯಾಮ್ ನಗರದಲ್ಲಿ. ಕೆಲವು ಕತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. 'ಅನಿವಾಸಿ' ಎಂಬ ಜಾಲತಾಣದಲ್ಲಿ ಸಕ್ರಿಯರಾಗಿದ್ದಾರೆ.